ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಇಲ್ಲ

ಆ) ಜಿಲ್ಲಾ ಪೊಲೀಸ್ ಅಧೀಕ್ಷಕರುಗಳಿಗೆ

ಇ) ಈಗಾಗಲೇ ಅಸ್ತಿತ್ವದಲ್ಲಿದೆ

ಈ) ಬೆಂಗಳೂರಿನಲ್ಲಿ ಪೊಲೀಸ್ ಪ್ರಧಾನ ಕಛೇರಿಯಲ್ಲಿ ಹಾಗೂ ಎಲ್ಲಾ ಜಿಲ್ಲಾ ಪೊಲೀಸ್ ಕಛೇರಿಗಳಲ್ಲಿ ಸ್ಥಾಪಿಸಲಾಗಿದೆ.

ಉ) ಬೆಂಗಳೂರಿನ ಪ್ರಧಾನ ಕಛೇರಿಯಲ್ಲಿ ಐಜಿಪಿ ದರ್ಜೆಯ ಅಬಕಾರಿ ಹಾಗೂ ಜಿಲ್ಲಾ ಪೊಲೀಸ್ ಕಛೇರಿಗಳಲ್ಲಿ ಒಬ್ಬ ಪೊಲೀಸ್ ಉಪಾಧೀಕ್ಷಕರ ಹುದ್ದೆಯ ಅಧಿಕಾರಿ.

ಪಂಪ್‌ಸೆಟ್ ವಿದ್ಯುತ್ ಬಾಕಿ ಪಾವತಿಸಿದರೆ ಬಡ್ಡಿ ಮನ್ನಾ ಯೋಜನೆ

2609(2943) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನೀರಾವರಿ ಪಂಪ್ ಸೆಟ್ ಬಳಕೆದಾರರಿಗೆ ವಿದ್ಯುತ್ ಬಾಕಿ ಪಾವತಿಸಲು ಕಾಲಮಿತಿ ಹಾಕಲಾಗಿದೆಯೆ;

ಆ) ಯಾವಾಗಿನಿಂದ ಬಾಕಿ ಪಾವತಿಸಿದಲ್ಲಿ ಬಡ್ಡಿ ಮನ್ನಾ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ;

ಇ) ಇದರಿಂದಾಗಿ ರಾಜ್ಯದ ಎಷ್ಟು ಜನ ರೈತರಿಗೆ ಎಷ್ಟು ಕೋಟಿ ರೂ. ಬಡ್ಡಿಯನ್ನು ಮನ್ನಾ ಮಾಡಿದಂತಾಗುತ್ತದ;

ಈ) ಇದರ ಪ್ರಯೋಜನ ಪಡೆದ ರೈತಾಪಿ ಜನರ ಜಿಲ್ಲಾವಾರು ಮಾಹಿತಿ ನೀಡುವುದು;

ಉ) ಮುನಃ ಕೊನೆಯ ದಿನಾಂಕವನ್ನು ವಿಸ್ತರಿಸಲು ಸರ್ಕಾರ ಪರಿಶೀಲಿಸುವುದೆ?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ನೀರಾವರಿ ಪಂಪು ಸೆಟ್ಟು ಬಳಕೆದಾರರು, ಬಡ್ಡಿ ಮನ್ನಾ ವಿಶೇಷ ಯೋಜನೆಯ ಸೌಲಭ್ಯವನ್ನು ಪಡೆಯಲು, ಬಾಕಿ ಮೊತ್ತದಲ್ಲಿ ಅಸಲನ್ನು ಪೂರ್ತಿಯಾಗಿ 31-7-2003ರವರೆಗೆ ಕಾಲಮಿತಿಯನ್ನು ವಿಧಿಸಲಾಗಿದೆ.

ಆ) ದಿನಾಂಕ 31-3-2003ರ ಅಂತ್ಯದವರೆಗಿನ ವಿದ್ಯುತ್ ಬಾಕಿಯ ಅಸಲನ್ನು ಪೂರ್ತಿಯಾಗಿ ದಿನಾಂಕ 1-4-2003 ರಿಂದ 31-7-2003ರ ಅವಧಿಯೊಳಗೆ ಪಾವತಿ ಮಾಡಿದಲ್ಲಿ, ಬಡ್ಡಿಯನ್ನು ಮನ್ನಾ ಮಾಡಲಾಗುತ್ತದೆ.

ಇ) ದಿನಾಂಕ 3-7-2003 ರಲ್ಲಿದ್ದಂತೆ, ಬಾಕಿ ಅಸಲನ್ನು ಪೂರ್ತಿಯಾಗಿ ಪಾವತಿಸಿರುವ 29,753 ನೀರಾವರಿ ಪಂಪುಸೆಟ್ಟು ಬಳಕೆದಾರರಿಗೆ 2.11 ಕೋಟಿ ರೂ.ಗಳ ಬಡ್ಡಿಯನ್ನು ಮನ್ನಾ ಮಾಡಲಾಗಿದೆ.

ಈ) ಬಡ್ಡಿ ಮನ್ನಾ ಮಾಡುವ ವಿಶೇಷ ಯೋಜನೆಯಡಿಯಲ್ಲಿ 3-7-2003 ರಲ್ಲಿದ್ದಂತೆ, ಪ್ರಯೋಜನ ಪಡೆದ ನೀರಾವರಿ ಪಂಪುಸೆಟ್ಟು ಬಳಕೆದಾರರ ಒಟ್ಟು ಸಂಖ್ಯೆ 29,753 ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಉ) ಇಲ್ಲ.

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2943**ಕ್ಕೆ ಅನುಬಂಧ:–

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಬಡ್ಡಿ ಮನ್ನಾ ಮಾಡುವ ವಿಶೇಷ ಯೋಜನೆಯಡಿಯಲ್ಲಿ ದಿನಾಂಕ : **3.7.2003**ರ ಅಂತ್ಯದಲ್ಲಿದ್ದಂತೆ ಪ್ರಯೋಜನ ಪಡೆದ ನೀರಾವರಿ ಪಂಪುಸೆಟ್ಟು ಬಳಕೆದಾರರ ಸಂಖ್ಯೆ
1	2	3
1.	ಬೆಂಗಳೂರು ನಗರ	1258
2.	ಬೆಂಗಳೂರು ಗ್ರಾಮಾಂತರ	714
3.	ಕೋಲಾರ	432
4.	ತುಮಕೂರು	278
5.	ಚಿತ್ರದುರ್ಗ	925
6.	ದಾವಣಗೆರೆ	586
7.	ದಕ್ಷಿಣ ಕನ್ನಡ	1374
8.	ಉಡುಪಿ	681
9.	ಶಿವಮೊಗ್ಗ	424
10.	ಚಿಕ್ಕಮಗಳೂರು	23
11.	ಮೈಸೂರು	769
12.	ಚಾಮರಾಜನಗರ	172
13.	ಮಂಡ್ಯ	114
14.	ಮಡಿಕೇರಿ	153
15.	ಹಾಸನ	279
16.	ಧಾರವಾಡ	455
17.	ಗದಗ್	241
18.	ಹಾವೇರಿ	757
19.	ಉತ್ತರ ಕನ್ನಡ	1000
20.	ಬೆಳಗಾಂ	11400
21.	ವಿಜಾಪೂರ	1204
22.	ಬಾಗಲಕೋಟೆ	2262
23.	ಗುಲಬರ್ಗಾ	1735
24.	ಬೀದರ್	926

1	2	3
25.	ರಾಯಚೂರು	572
26.	ಕೊಪ್ಪಳ	334
27.	ಬಳ್ಳಾರಿ	685
	ಒಟ್ಟು	**29,753**

ಬೆಂಗಳೂರು ನಗರದಲ್ಲಿರುವ ಸಂಚಾರಿ ಪೊಲೀಸರ ಕುರಿತು

2610(2944) ಶ್ರೀ ಲಕ್ಷ್ಮೀ ನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಸಂಚಾರಿ ಪೊಲೀಸರ ಸಂಖ್ಯೆ ಎಷ್ಟು;

ಆ) ಇವರಿಗೆ ಇರುವ ಸೌಲಭ್ಯಗಳೇನು? ಕರ್ತವ್ಯ ನಿರ್ವಹಿಸುವ ಸಂಚಾರಿ ಪೊಲೀಸರಿಗೆ ನಿಗಧಿಪಡಿಸಿದ ಸಮಯ ಎಷ್ಟು;

ಇ) ನಿಗಧಿಪಡಿಸಿದ ಸಮಯವನ್ನು ಹೊರತುಪಡಿಸಿ ಹೆಚ್ಚಿಗೆ ಸಮಯವನ್ನು ಕರ್ತವ್ಯಕ್ಕೆ ಬಳಕೆ ಮಾಡಿಕೊಳ್ಳುತ್ತಿರುವುದು ನಿಜವೇ;

ಈ) ಇಂತಹ ಸಿಬ್ಬಂದಿಗಳಿಗೆ ಸಿಗುವ ವೇತನ ಇತರೆ ಭತ್ಯೆಗಳು ಕಡಿಮೆ ಎನ್ನುವ ವಿಚಾರದ ಬಗ್ಗೆ ಸರ್ಕಾರದ ನಿಲುವೇನು;

ಉ) ಆರೋಗ್ಯದ ದೃಷ್ಟಿಯಿಂದ ಸಂಚಾರದ ಒತ್ತಡದಲ್ಲಿ ಇವರಿಗೆ ತೊಂದರೆಗಳು ಆಗುತ್ತಿರುವ ಬಗ್ಗೆ ಅನುಸರಿಸುವ ಪರಿಹಾರ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) 1121

ಆ) 1. ವಸತಿ ಸೌಕರ್ಯವಿರುತ್ತದೆ.

2. ಮಾಸಿಕ ಉಚಿತ ಆಹಾರ ಧಾನ್ಯ ವಿತರಣೆ ಇರುತ್ತದೆ.

3. ವಾರದ ಭತ್ಯೆ, ಪತ್ರಾಂಕಿತ ರಜಾ ಭತ್ಯೆ, ಗಳಿಕೆ ರಜೆಯ ನಗದೀಕರಣ, ವೈದ್ಯಕೀಯ ಮರುಪಾವತಿ ಹಾಗೂ ಭತ್ಯೆ ಇತ್ಯಾದಿ.

4. ಸಮವಸ್ತ್ರ ವಿತರಣೆ.

5. ಆರೋಗ್ಯ ತಪಾಸಣೆ ಶಿಬಿರಗಳನ್ನು ಏರ್ಪಡಿಸಿ ಸಿಬ್ಬಂದಿಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸೆ.

6. ಸಂಚಾರ ನಿಯಂತ್ರಣಾ ಕಾರ್ಯದ ಸಿಬ್ಬಂದಿಯು ಪ್ರತಿದಿನ 2 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ, ಬೆಳಿಗ್ಗೆ 7 ಗಂಟೆಯಿಂದ 2 ಗಂಟೆಯವರೆಗೆ ಹಾಗೂ ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ.

ಇ) ಹೌದು

ಈ) ಸಂಚಾರಿ ಪೊಲೀಸರಿಗೆ ಪ್ರತ್ಯೇಕ ವೇತನ ಲಭ್ಯವಿರುವುದಿಲ್ಲ.

ಉ) ಸಂಚಾರಿ ಪೊಲೀಸರ ಆರೋಗ್ಯದ ಹಿತದೃಷ್ಟಿ ಮತ್ತು ವಾಯು ಮಾಲಿನ್ಯದಿಂದ ರಕ್ಷಿಸುವ ಸಲುವಾಗಿ ತಪಾಸಣಾ ಕೇಂದ್ರಗಳನ್ನು ನಡೆಸಿ ನುರಿತ ವೈದ್ಯರ ಸಲಹೆ ಪಡೆದು, ನಿಗಧಿತ ಆಸ್ಪತ್ರೆಗಳಲ್ಲಿ